ಲೆಕ್ಕ ಹಾಕಿದ. ಗೋವಿಂದರಾಜ , 'ನಿಮಗ ಓಸಿ ಬಗ್ಗೆ ಸ್ವಲ್ಪ ಮಾಹಿತಿ ತಗಂಡರ ನನ ರೂಟು ಅರ್ಥ ಆಗತಾವ ಇಲ್ಲಂದ್ರ ಅರ್ಥಾನೇ ಆಗಲ್ಲ' ಅಂದ. 'ಗೋವಿಂದಣ್ಣ ಎಷ್ಟೊತ್ತಾದ್ರೂ ಹೇಳು ನಾವೇನು ಇವಾಗ ಖಾಲಿ ಐದೀವಿ' ಅಂತ ಕೊಬರಿದಾಸ ಹೇಳಿದಾಗ ಎಲ್ಲರೂ ಅದಕ್ಕೆ ದನಿಗೂಡಿಸಿದರು. 'ಆಯ್ತು ಕೇಳ್ರಿ, ಮೊದಲು ರತನ್ ಖತ್ರಿಲಾಲ್ ಇದನ್ನ ಬೊಂಬಾಯಿದಾಗ ಸುರುವು ಮಾಡಿದ. 'ಬಾಂಬೆ ಮೇನ್ ಆಟ'. ನಿಮಗಂತೂ ಎಲ್ಲರಿಗೂ ಎರಡಂಕಿಯ ಮೊದಲನೇ ಅಂಕಿ ಓಪನ್ ಒಂಬತ್ತು ಗಂಟೆ ಎರಡನೇ ಅಂಕಿ ಕ್ಲೋಸ್ ರಾತ್ರಿ ಹನ್ನೆರಡುಗಂಟೆಗೆ ಬರತೈತಿ'. 'ಅದು ಗೊತ್ತೈತಿ ಬಿಡು ಓಪನ್‌ಗೆ ಊಟಿಲ್ಲ, ಕ್ಲೋಸಿಗೆ ನಿದ್ದೆ ಇಲ್ಲಂತ ಗಾದಿ ಮಾತು ಹುಟ್ಟಿಗೆಂಡುಬಿಟ್ಟೈತಿ' ಅಂತ ಬ್ಯಾಳೆಯಲ್ಲಪ್ಪ ನಡುವೆ ಬಾಯಿಹಾಕಿದಾಗ. 'ಸುಮ್ಮನೆ ಕುಂದ್ರೋ ಮಾವ ಆತ ಓಟು ಹೇಳತನ, ನಿಂದು ಮುಕಳೆ ಟೆಂವ್... ಅಂತೈತಿ ನೋಡು, ದೊಡ್ಡ ರೂಟಗಾರ ಸ್ವಲ್ಪ ಹೇಳೋದು ಕೇಳಬೇಕು ಅಂತ ಅಂಬಣ್ಣ ಗತ್ತು ಹಾಕಿದ. ಮತ್ತೆ ಗೋವಿಂದರಾಜ ಎಡಗೈಲೆ ಮೀಸೆ ಸವರುತ್ತಾ ಸುರು ಮಾಡಿದ. 'ಇದು ಎರಡಂಕಿ ಆಟ 00ದಿಂದ ಹಿಡಿದು 99ರವರೆಗೆ, ಒಟ್ಟು ನೂರು ಸಂಖ್ಯೆಯ ಆಟ. ಎಡಕ್ಕ ಬರೋದು ಓಪನ್, ಬಲಕ್ಕ ಬರೋದು ಕ್ಲೋಸ್. ಪ್ರತಿ ಓಪನ್ 0ದಿಂದ 9ರವರೆಗಿ ಹತ್ತು ಅಂಕಿ ಇರತಾವ, ಇದರಂತೆ ಕ್ಲೋಸ್ ಕೂಡ 0 ದಿಂದ 9 ರವರೆಗಿ ಹತ್ತು ಅಂಕಿ ಇರತಾವ, ಎರಡು ಸೇರಿ ಒಂದು ಜೋಡಿ ನಂಬರ್ ಆಗ್ತದ. ಆದ್ರೆ ಪ್ರತಿ ಓಪನ್ ಮತ್ತು ಕ್ಲೋಸ್‌ಗೆ ಒಂದು ಪಾನಾ ನಂಬರ್ ಇರುತ್ತ, ಪಾನಾ ನಂಬರ್ ಯಾವಗ್ಲೂ ಮೂರು ಅಂಕಿಗಳಿಂದ ಕೂಡಿದ್ದು, ಅದು ಏರಿಕೆ ಕ್ರಮದಲ್ಲಿರುತ್ತದೆ. ಯಂಗಂದ್ರ 129 ಪಾನಾ ಬರುತಾದ ಹೊರತು, 921 ಪಾನಾ ಅಂತ ಇರಂಗಿಲ್ಲ ಬರಂಗಿಲ್ಲ. ಎಲ್ಲಾ ಪಾನಾಗಳು ಏರಿಕೆಕ್ರಮದಿಂದ ಕೂಡಿದ್ದಕ್ಕೆ ಪ್ರತಿ ಓಪನ್ ಅಥವಾ ಕ್ಲೋಸ್‌ಗೆ ಇಪ್ಪತ್ತೆರಡು ಪಾನಾ ಇರುತಾವ ಅಂತ ಚಾಟಿನಲ್ಲಿ ಇದ್ದ ಪಾನಾ ಸಮೇತ ಇದ್ದ ಒಂದು ಸಂಖ್ಯೆ ತೋರಿಸಿದ 690-51-489.

ಎಲ್ಲರೂ ಬಾಯಿ ತೆರೆದುಕೊಂಡೇ ಗೋಣು ಚಾಟಿನತ್ತ ಬಗ್ಗಿಸಿದರು. ದೊಡ್ಡಕರಿಯಪ್ಪ ಚಾಟಿನ ಮೇಲೆ ತನ್ನ ಮಂಡಬಟ್ಟು ಇಡುತ್ತಾ, ಇದರಾಗ ಸ್ವಲ್ಪ ಕೆಂಪಗಾ ಸ್ವಲ್ಪ ಕರ‍್ರಗಾ ಐದ್ಯಾವಲ್ಲ ಇವೇನಣ್ಣ ಅಂತ ಕೇಳಿದ. ಗೋವಿಂದರಾಜ ಕಿವಿಯಲ್ಲಿ ತುರುಕಿಕೊಂಡಿದ್ದ ಬೀಡಿಯನ್ನ ಕೈಯಲ್ಲಿ ಹಿಡಿದುಕೊಂಡು, 'ನೂರು ಸಂಖ್ಯೆಯಲ್ಲಿ 80 ಕರಿಸಂಖ್ಯೆ 20 ಕೆಂಪು ಸಂಖ್ಯೆ ಇರತಾವ. ಕೆಂಪು ಸಂಖ್ಯೆಯಲ್ಲಿ ಕೂಡ ಎರಡು ಭಾಗ ಮಾಡಿರತಾರ ಹತ್ತನ್ನ ಹಾಫ್‌ಗೇಮ್ ಅಂತ ಕರೆದರೆ ಇನ್ನುಳಿದ ಹತ್ತನ್ನ ಫುಲ್‌ಗೇಮ್ ಅಂತ ಕರಿತಾರ. ಒಂದು ಸಂಖ್ಯೆಯ ಬಲಅಂಕಿಯಿಂದ ಎಡಅಂಕಿಯನ್ನ ಕಳೆದರೆ ಉತ್ತರ '5' ಬಂದರೆ ಅದು ಹಾಫ್‌ಗೇಮ್. ಉದಾಹರಣೆ: 05. ಬಲಅಂಕಿಯಿಂದ ಎಡಅಂಕಿಯನ್ನು ಕಳೆದರೆ '0' ಉತ್ತರ ಬಂದರೆ ಅದು ಫುಲ್‌ಗೇಮ್. ಉದಾಹರಣೆ: 11. ಇವನ್ನ ಬಿಟ್ಟು ಉಳಿದ ಸಂಖ್ಯೆಗಳೆಲ್ಲಾ ಕರಿಸಂಖ್ಯೆಗಳು. ಇದರಲ್ಲಿ ಬೆರೇಜು ಅಂತ ಟೋಟಲ್ ಹತ್ತು ಬೆರೇಜು ಇರತಾವ. ಒಂದು ಸಂಖ್ಯೆಯ ಎಡ ಅಂಕಿ ಮತ್ತು ಬಲ ಅಂಕಿಯನ್ನು ಕೂಡಿಸಿದರೆ ಬೆರೇಜು ಅಂತೀವಿ. ಯಂಗಪಂದ್ರ 39 ಬಂದಿತ್ತಂದ್ರ $3 + 9 = 12$ ಈ ತರಹ ಬಂದ ಉತ್ತರದಿಂದ ಕೊನೆ ಅಂಕಿ ಬೆರೇಜು ಆಗುತ್ತೆ, 39 ಎರಡರ ಬೆರೇಜು ಆಟ ಎಂದರ್ಥ. ಇದೇ ರೀತಿ ಡಿಫ್ರನ್ಸ್ ಅಂತ ಅವು ಹತ್ತು ಡಿಫ್ರನ್ಸ್ ಇದ್ದು, ಸಂಖ್ಯೆಯ ಬಲಭಾಗದಿಂದ ಎಡಭಾಗದ ಅಂಕಿಯನ್ನು ಕಳೆದಾಗ ಬರುವ ಅಂಕಿಯೇ ಡಿಫ್ರನ್ಸ್. ಈಗ 28 ನ್ನು $8-2 = 6$ ಇಪ್ಪತ್ತೆಂಟನ್ನು ಆರು ಡಿಫ್ರನ್ಸ್ ಆಟ ಅಂತಾರ. ನೂರು ಸಂಖ್ಯೆಯಲ್ಲಿ, ಪ್ರತಿಯೊಂದು ಸಂಖ್ಯೆ ಪ್ರತಿಯೊಂದು ಬೆರೇಜು ಪ್ರತಿಯೊಂದು ಡಿಫ್ರನ್ಸ್‌ನಿಂದ ಕೂಡಿರತಾವ. ಇನ್ನು ಸರಳವಾಗಿ ಹೇಳಬೇಕಂದ್ರ ಕೆಂಪು ಅಂಕಿಗಳಾದ ಹಾಫ್‌ಗೇಮ್ 5 ಡಿಫ್ರನ್ಸ್ ಫುಲ್‌ಗೇಮ್ 0 ಡಿಫ್ರನ್ಸ್‌ನಿಂದ ಕೂಡಿರತಾವ. ಅವಳೆಪ್ಪಗ ಏನು ಅರ್ಥ ಆಗಲಿಲ್ಲ ತಲೆ ತುರಿಸಿಗ್ಯಾಂತ ಕುಂತಿದ್ದ. ಮತ್ತೆ ಗೋವಿಂದರಾಜ ಒಂದು ಬೀಡಿ ಝುರಿ ಎಳದು ಮುಂದುವರಿಸಿದ. ಅಂಬಣ್ಣ, 'ಅದೇನಾ ಅಪೋಸಿಟ್ ಸಂಖ್ಯಿ ಅಂತಿರತಾರಲ್ಲ ಅದೇನಣ್ಣಾ?' ಅಂದಾಗ ಬೀಡಿಯನ್ನ ಗೊಸ್ ಅಂತ ಎಳದು ಮೂಗಿನಲ್ಲಿ ಹೊಗೆಬಿಡುತ್ತಾ ಗೋವಿಂದರಾಜ, 'ಅಪೋಸಿಟ್ ಪ್ರತಿ ಅಂಕಿಗೆ ಐದನ್ನು ಕೂಡಿಸಿದರೆ ಅದು ಅಪೋಸಿಟ್ ಆಗುತ್ತದೆ. 1ಕ್ಕೆ 5ನ್ನು ಕೂಡಿಸಿದರೆ ಆರು ಒಂದರ ಅಪೋಸಿಟ್ ಆರು ಅಂತ ಅರ್ಥ.'

'ಈಗ ನೋಡ್ರಪ್ಪ ಎಲ್ಲಾ ಗೊತ್ತಾತಿಲ್ಲ ಒಂದು ನಂಬರ್